**All India Radio: Bangalore**
**National Bulletin In Kannada**
**09.03.2025  19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**09.03.2025  19.35 p.m.**

**<><><><>**

ಮುಖ್ಯಾಂಶಗಳು

- ಕೃತಕ ಬುದ್ಧಿಮತ್ತೆ - ಎಐ ಮಹಿಳೆಯರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುವಲ್ಲಿ ಸಹಕಾರಿ - ಪ್ರಧಾನಿ ನರೇಂದ್ರ ಮೋದಿ
- ನಾಳೆಯಿಂದ ಎರಡು ದಿನಗಳ ಕಾಲ ಮಾರಿಷಸ್‌ಗೆ ಪ್ರಧಾನಮಂತ್ರಿ ಪ್ರವಾಸ ; ಮಾರಿಷಸ್ ಪ್ರಧಾನಿಯೊಂದಿಗೆ ದ್ವಿಪಕ್ಷೀಯ ಮಾತುಕತೆ
- ಸಂಸತ್ತಿನ ಎರಡನೇ ಹಂತದ ಬಜೆಟ್ ಅಧಿವೇಶನ ; ನಾಳೆಯಿಂದ ವಿವಿಧ ಅನುದಾನ, ಮಸೂದೆಗಳ ಚರ್ಚೆ ಸಾಧ್ಯತೆ
- ನಾಳೆಯಿಂದ ಹರಿಯಾಣ, ಚಂಡಿಗಢ ಮತ್ತು ಪಂಜಾಬ್‌ಗೆ ರಾಷ್ಟ್ರಪತಿ ಭೇಟಿ; ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ
- ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಫೈನಲ್ ಪಂದ್ಯ; ಗೆಲ್ಲಲು ನ್ಯೂಜಿಲೆಂಡ್‌ನಿಂದ ಭಾರತಕ್ಕೆ ೨೫೨ ರನ್‌ಗಳ ಗುರಿ

<><><><>

ಕೃತಕ ಬುದ್ಧಿಮತ್ತೆ - ಎಐ ಮಹಿಳೆಯರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುವಲ್ಲಿ ಸಹಕಾರಿಯಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮಹಿಳಾ ಸಶಕ್ತಿಕರಣದಲ್ಲಿ ಕೃತಕಬುದ್ಧಿಮತ್ತೆ ಪಾತ್ರ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ರಾಜ್ಯ ಸಚಿವೆ ಸಾವಿತ್ರಿ ಠಾಕೂರ್, ಬರೆದಿರುವ ಲೇಖನವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ಪ್ರಧಾನಿಯವರು, ಕೃತಕ ಬುದ್ಧಿಮತ್ತೆ ಮಹಿಳೆಯರಿಗೆ ಅತ್ಯಂತ ಪ್ರಯೋಜನಕಾರಿಯಾಗಿದೆ ಎಂದಿದ್ದಾರೆ. ಭಾರತವನ್ನು ೨೦೪೭ರ ವೇಳೆಗೆ ಅಭಿವೃದ್ಧಿ ಹೊಂದಿದ

ರಾಷ್ಟ್ರವನ್ನಾಗಿಸುವ ಸಂಕಲ್ಪವನ್ನು ಸಾಕಾರಗೊಳಿಸಲು ಪ್ರಧಾನಮಂತ್ರಿಯವರು ಬಲಿಷ್ಠ ಹಾಗೂ ಆತ್ಮ ನಿರ್ಭರ ದೇಶಕ್ಕಾಗಿ ಶ್ರಮಿಸುತ್ತಿದ್ದಾರೆ. ಇದರಲ್ಲಿ ಮಹಿಳೆಯರ ಸಮಾನ ಸಹಭಾಗಿತ್ವ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕೃತಕಬುದ್ಧಿಮತ್ತೆ ಮಹಿಳೆಯರಿಗೆ ಹೊಸ ಅವಕಾಶಗಳನಷ್ಟೇ ಅಲ್ಲ, ಸಮಾಜದಲ್ಲಿ ಪ್ರಮುಖ ಪಾತ್ರ ನಿರ್ವಹಿಸಲು ಅವರನ್ನು ಸಶಕ್ತಗೊಳಿಸುತ್ತದೆ ಎಂದು ಸಾವಿತ್ರಿ ಠಾಕೂರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಪ್ರಧಾನಿ ನರೇಂದ್ರ ಮೋದಿ ನಾಳೆಯಿಂದ ಮಾರಿಷಸ್‌ಗೆ ಎರಡು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ.  ನಾಡಿದ್ದು, ನಡೆಯಲಿರುವ ಮಾರಿಷಸ್ ರಾಷ್ಟ್ರೀಯ ದಿನದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಪ್ರಧಾನಿ ಭೇಟಿಯ ಬಗ್ಗೆ ದೆಹಲಿಯಲ್ಲಿ ಮಾಹಿತಿ ನೀಡಿದ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ವಿಕ್ರಮ್ ಮಿಸ್ತ್ರಿ, ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಮಾರಿಷಸ್ ಪ್ರಧಾನಿ ನವೀನ್ ರಾಮ್ ಗುಲಾಮ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.  ಮಾರಿಷಸ್ ರಾಷ್ಟ್ರಪತಿ ಧರಮ್ ಬೀರ್ ಗೋಕುಲ್ ಅವರನ್ನೂ ಭೇಟಿಯಾಗಲಿದ್ದಾರೆ. ಮಾರಿಷಸ್ ಭಾರತದ ಸ್ನೇಹರಾಷ್ಟ್ರವಾಗಿದ್ದು, ಹಲವು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಹಭಾಗಿತ್ವ ಹೊಂದಿವೆ. ಮಾರಿಷಸ್‌ನ ರಕ್ಷಣಾ ಹಾಗೂ ಸಮುದ್ರ ಭದ್ರತೆ ವಿಭಾಗದ ಸಾಮರ್ಥ್ಯ ವರ್ಧನೆಗೆ ಭಾರತ ನೆರವು ನೀಡಿದೆ ಎಂದು ಹೇಳಿದರು. ಮಾರಿಷಸ್ ರಾಷ್ಟ್ರೀಯ ದಿನದ ಕಾರ್ಯಕ್ರಮದಲ್ಲಿ ಭಾರತದ ನೌಕಾದಳದ ಒಂದು ಹಡಗು ಸೇರಿದಂತೆ ಭದ್ರತಾ ಪಡೆಗಳ ತುಕಡಿಗಳು ಪಾಲ್ಗೊಳ್ಳಲಿವೆ. ೨೦೧೫ರಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾರಿಷಸ್ ಗೆ ಭೇಟಿ ನೀಡಿದ್ದರು.

<><><>

ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಭಾಗ ನಾಳೆಯಿಂದ ಆರಂಭವಾಗಲಿದೆ. ಅಧಿವೇಶನ ಏಪ್ರಿಲ್ ೪ರವರೆಗೆ ನಿಗದಿಯಾಗಿದೆ. ಪ್ರಸ್ತುತ ರಾಷ್ಟ್ರಪತಿ ಆಳ್ವಿಕೆಯಿರುವ ಮಣಿಪುರದ ಬಜೆಟ್ ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ನಾಳೆ ಮಂಡಿಸಲಿದ್ದಾರೆ. ಈ ಅಧಿವೇಶನದಲ್ಲಿ ೨೦೨೫-೨೬ನೇ ಸಾಲಿನ ಅನುದಾನ ಬೇಡಿಕೆಗಳು ಮತ್ತು ಸಂಬಂಧಿತ ವಿನಿಯೋಗ ಚರ್ಚೆ ಮತ್ತು ಅನುದಾನ ನಡೆಯಲಿದೆ ಎಂದು ನಮ್ಮ ಭಾತ್ಮಿದಾರರು ತಿಳಿಸಿದ್ದಾರೆ. ಇದಲ್ಲದೆ, ಬ್ಯಾಂಕಿಂಗ್ ಕಾನೂನುಗಳು ತಿದ್ದುಪಡಿ ವಿಧೇಯಕ, ಕರಾವಳಿ ಸಾಗಣೆ ವಿಧೇಯಕ ೨೦೨೪, ತ್ರಿಭುವನ್

ಸಹಕಾರಿ ವಿಶ್ವವಿದ್ಯಾಲಯದ ವಿಧೇಯಕ, ವಲಸೆ ಮತ್ತು ವಿದೇಶಿಯರ ವಿಧೇಯಕ ೨೦೨೫ ಮತ್ತು ರೈಲ್ವೆ ತಿದ್ದುಪಡಿ ವಿಧೇಯಕ ಸೇರಿದಂತೆ ಹಲವಾರು ಮಸೂದೆಗಳ ಮೇಲೆ ಚರ್ಚೆ ಸಾಧ್ಯತೆಯಿದೆ.

<><><><>

ವಿಶ್ವ, ಶ್ರಾವ್ಯ, ದೃಶ್ಯ ಮತ್ತು ಮನೋರಂಜನಾ ಶೃಂಗಸಭೆ ವೇವ್ಸ್ ಅಂಗವಾಗಿ ಏರ್ಪಡಿಸಲಾಗಿರುವ ಅನಿಮೇಶನ್ ಫಿಲ್ಮ್ ಮೇಕರ್ಸ್ ಸ್ಪರ್ಧೆಗೆ ಒಟ್ಟು ಒಂದು ಸಾವಿರ ೨೯೦ ಅಭ್ಯರ್ಥಿಗಳು ಪ್ರವೇಶ ಅರ್ಜಿ ಸಲ್ಲಿಸಿದ್ದಾರೆ. ಇದರಲ್ಲಿ ೧೯ ಅಂತಾರಾಷ್ಟ್ರೀಯ ಅಭ್ಯರ್ಥಿಗಳು ಸೇರಿದ್ದಾರೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ನೇತೃತ್ವದಲ್ಲಿ ವೇವ್ಸ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ವೇವ್ಸ್ ಶೃಂಗಸಭೆ ಮೇ ೧ ರಿಂದ ೪ ರವರೆಗೆ ಮುಂಬೈನಲ್ಲಿ ನಡೆಯಲಿದೆ. ಈ ಸ್ಪರ್ಧೆಯು ಹವ್ಯಾಸಿ ಮತ್ತು ವೃತ್ತಿಪರರ ಸೃಜನಶೀಲತೆಗೆ ಅವಕಾಶವನ್ನು ನೀಡಲಿದ್ದು, ಭಾಗವಹಿಸುವ ಸ್ಪರ್ಧಿಗಳು ಅತ್ಯಾಕರ್ಷಕ ಬಹುಮಾನ ಮತ್ತು ಜಾಗತಿಕ ಮಾನ್ಯತೆಯನ್ನು ಪಡೆಯಲಿದ್ದಾರೆ.

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ಆರೋಗ್ಯದ ಬಗ್ಗೆ ಪತ್ನಿ ಡಾ. ಸುದೇಶ್ ಧನ್‌ಕರ್ ಅವರೊಂದಿಗೆ ವಿಚಾರಿಸಿದರು. ಜಗದೀಪ್ ಧನ್‌ಕರ್ ಅವರ ಆರೋಗ್ಯ ಸುಧಾರಿಸುತ್ತಿದೆ ಎಂದು ರಾಷ್ಟ್ರಪತಿಯವರು ಸಾಮಾಜಿಕ ಮಾಧ್ಯಮದಲ್ಲಿ ಸಂತಸ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಇಂದು ನವದೆಹಲಿಯ ಏಮ್ಸ್‌ಗೆ ಭೇಟಿ ನೀಡಿ, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ಆರೋಗ್ಯ ವಿಚಾರಿಸಿದ ಅವರು, ಉತ್ತಮ ಆರೋಗ್ಯ ಮತ್ತು ಶೀಘ್ರ ಗುಣಮುಖರಾಗುವಂತೆ ದೇವರಲ್ಲಿ ಪ್ರಾರ್ಥಿಸಿದರು. ಜಗದೀಪ್ ಧನ್‌ಕರ್ ನಿನ್ನೆ ರಾತ್ರಿ ಅಸ್ವಸ್ಥರಾಗಿ ಏಮ್ಸ್‌ಗೆ ದಾಖಲಾಗಿದ್ದರು. ಅವರ ಸ್ಥಿತಿಯು ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿದೆ.

<><><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಗುಜರಾತ್‌ನ ಅಹಮದಾಬಾದ್‌ನಲ್ಲಿಂದು ಸಾಸ್ತು, ಸಾಹಿತ್ಯ ಮುದ್ರಣಾಲಯ ಟ್ರಸ್ಟ್, ಮರು ಮುದ್ರಿತ ೨೪ ಪುಸ್ತಕಗಳನ್ನು ಬಿಡುಗಡೆಗೊಳಿಸಿದರು. ಈ ವೇಳೆ ಮಾತನಾಡಿದ ಅವರು, ಖ್ಯಾತ ವಿದ್ವಾಂಸರಾದ ಗೋವರ್ಧನ್ ರಾಮ್ ತ್ರಿಪಾಠಿ, ಹೇಮಚಂದ್ರ ಚಾರ್ಯ, ನರ್ಮದ್ ನರಸಿಂಹ ಮೆಹ್ತಾ ಮತ್ತು ಜಾವರ್‌ಚಂದ್ ಮೇಘಾನಿ, ಗುಜರಾತಿ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಶ್ಲಾಘಿಸಿದರು. ಇದಕ್ಕೂ ಮುನ್ನ ಕೇಂದ್ರ ಗೃಹ ಸಚಿವರು

ಜೈನಾಚಾರ್ಯ ಶ್ರೀಮದ್ಧ ಬುದ್ಧಿಸಾಗರ ಸುರೀಶ್ವರ್ಜಿ ಮಹಾರಾಜರ ಗೌರವಾರ್ಥದ ನಾಣ್ಯವನ್ನು ಬಿಡುಗಡೆಗೊಳಿಸಿದರು.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮುರವರು ನಾಳೆಯಿಂದ ಮೂರುದಿನಗಳ ಕಾಲ ಹರಿಯಾಣ, ಚಂಡಿಗಢ ಮತ್ತು ಪಂಜಾಬ್‌ಗೆ ಭೇಟಿ ನೀಡಲಿದ್ದಾರೆ. ಮೊದಲ ದಿನದಂದು, ರಾಷ್ಟ್ರಪತಿಯವರು ಹಿಸಾರ್ ನಲ್ಲಿರುವ ಗುರು ಜಂಭೇಶ್ವರ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಂತರ ಅವರು ಬ್ರಹ್ಮಕುಮಾರಿಯವರ ಸುವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಸಮಗ್ರ ಯೋಗಕ್ಷೇಮಕ್ಕಾಗಿ ಆಧ್ಯಾತ್ಮಿಕ ಶಿಕ್ಷಣ ಎಂಬ ರಾಜ್ಯಮಟ್ಟದ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಮರುದಿನ ರಾಷ್ಟ್ರಪತಿಯವರು ಪಂಜಾಬ್ ಕೇಂದ್ರೀಯ ವಿಶ್ವವಿದ್ಯಾಲಯ ಮತ್ತು ಬಟಿಂಡಾದ ಏಮ್ಸ್‌ನ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಸಂಜೆ ಪಂಜಾಬ್ ಸರ್ಕಾರ ಮೊಹಾಲಿಯಲ್ಲಿ ಆಯೋಜಿಸಲಿರುವ ನಾಗರಿಕ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಗೂ ಮಾರ್ಚ್ ೧೨ ರಂದು ಚಂಡಿಘಡದಲ್ಲಿ ಪಂಜಾಬ್ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ರಾಷ್ಟ್ರಪತಿಗಳು ಭಾಗವಹಿಸಲಿದ್ದಾರೆ.

<><><>

ಸಾರ್ವಜನಿಕ ಸಾರ್ವತ್ರಿಕ ಆರೋಗ್ಯದ ವಿಚಾರದಲ್ಲಿ ಸರ್ಕಾರವು ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಹೇಳಿದ್ದಾರೆ. ನವೆಹಲಿಯಲ್ಲಿ ಇಂದು ನಡೆದ ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆಯ ೪೮ನೇ ವಾರ್ಷಿಕ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರವು ಆರೋಗ್ಯ ಸೇವೆಯನ್ನು ಜನರಿಗೆ ಸುಲಭವಾಗಿ ಮತ್ತು ಕೈಗೆಟಕುವಂತೆ ಮಾಡುತ್ತಿದೆ. ೨೦೧೪ರಲ್ಲಿ ೩೮೭ರಷ್ಟಿದ್ದ ವೈದ್ಯಕೀಯ ಕಾಲೇಜುಗಳ ಸಂಖ್ಯೆ, ೨೦೨೪ರ ವೇಳೆಗೆ ೭೮೭ಕ್ಕೆ ದಾಟಿದೆ. ದೇಶದಲ್ಲಿ ಏಮ್ಸ್ ಸಂಖ್ಯೆಯೂ ೬ ರಿಂದ ೨೨ಕ್ಕೆ ಏರಿಕೆಯಾಗಿದೆ ಎಂದು ಅವರು ಹೇಳಿದರು.

<><><>

ಮಧ್ಯ ಪ್ರದೇಶದ ಮಾಧವ್ ರಾಷ್ಟ್ರೀಯ ಉದ್ಯಾನವನವನ್ನು ಹುಲಿ ಸಂರಕ್ಷಿತ ಮೀಸಲು ಪ್ರದೇಶ ಎಂದು ಘೋಷಿಸಲಾಗಿದೆ. ಈ ಬಗ್ಗೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟಿಸಿದ್ದು, ಪರಿಸರ

ವೈವಿಧ್ಯತೆಯನ್ನು ಪುನಃ ಸ್ಥಾಪಿಸಲು ಪ್ರಧಾನಿ ನರೇಂದ್ರ ಮೋದಿಯವರು ಒತ್ತು ನೀಡುತ್ತಿದ್ದು, ಭಾರತವು ಪರಿಸರ ಸಂರಕ್ಷಣೆಯಲ್ಲಿ ಮಹತ್ತರವಾದ ಪ್ರಗತಿಯನ್ನು ಸಾಧಿಸುತ್ತಿದೆ ಎಂದರು. ಈ ವೇಳೆ ವನ್ಯಜೀವಿಪ್ರಿಯರು ಮತ್ತು ಸಂರಕ್ಷಣಾಕಾರರನ್ನು ಅವರು ಅಭಿನಂದಿಸಿದ್ದು, ಜೊತೆಗೆ ಅರಣ್ಯ ಸಂರಕ್ಷಣೆಗೆ ಶ್ರಮವಹಿಸುತ್ತಿರುವ ಅರಣ್ಯಾಧಿಕಾರಿಗಳ ಅವಿರತ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ ಎಂದರು.

<><><>

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಮತ್ತು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಡ್ಡಾ ಎರಡು ಹೊಸ ಯೋಜನೆಗಳನ್ನು ಹೆಣ್ಣು ಮಕ್ಕಳಿಗೆ ಘೋಷಿಸಿದ್ದಾರೆ. ಮುಖ್ಯಮಂತ್ರಿ ಬಾಲಿಕ ಸಮೃದ್ಧಿ ಯೋಜನೆ ಮತ್ತು ಮುಖ್ಯಮಂತ್ರಿ ಕನ್ಯಾ ಆತ್ಮ ನಿರ್ಭರ ಎಂಬ ಎರಡು ಯೋಜನೆಗಳನ್ನು ತ್ರಿಪುರದಲ್ಲಿ ಘೋಷಿಸಿದ್ದಾರೆ. ತ್ರಿಪುರಾದ ಅಗರ್ತಲಾದಲ್ಲಿರುವ ಸ್ವಾಮಿ ವಿವೇಕಾನಂದ ಮೈದಾನದಲ್ಲಿ ಮೆಗಾರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ತ್ರಿಪುರಾ ಸರ್ಕಾರದ ಈ ಎರಡು ಹೊಸ ಯೋಜನೆಗಳನ್ನು ಘೋಷಿಸಿದರು. ಮುಖ್ಯಮಂತ್ರಿ ಬಾಲಿಕಾ ಸಮೃದ್ಧಿ ಯೋಜನೆಯಡಿ, ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಗುವಿಗೆ ಸರ್ಕಾರ ೫೦ ಸಾವಿರ ರೂಪಾಯಿಗಳನ್ನು ಸರ್ಕಾರ ಜಮೆ ಮಾಡಲಿದೆ. ಹೆಣ್ಣು ಮಗು ೧೮ ವರ್ಷ ಪೂರೈಸಿದ ಸಂದರ್ಭದಲ್ಲಿ ೧೦ ಲಕ್ಷ ರೂಪಾಯಿಗಳು ಸಿಗಲಿದ್ದು, ವಿದ್ಯಾಭ್ಯಾಸ ಮತ್ತು ಇತರೆ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಬಹುದು. ಮುಖ್ಯಮಂತ್ರಿ ಕನ್ಯಾ ಆತ್ಮ ನಿರ್ಭರ ಯೋಜನೆಯಡಿ, ೧೪೦ ಪ್ರತಿಭಾನ್ವಿತ ಹೆಣ್ಣು ಮಕ್ಕಳಿಗೆ ಸ್ಕೂಟಿ ಯೋಜನೆಯಾಗಿದ್ದು, ಈ ಎರಡೂ ಯೋಜನೆಗಳು ಮುಖ್ಯಮಂತ್ರಿ ಡಾ. ಮಣಿಕ್ ಶಾ ಅವರ ಪರಿಕಲ್ಪನೆಯಾಗಿದೆ ಎಂದು ಜೆ.ಪಿ. ನಡ್ಡಾ ತಿಳಿಸಿದರು.

<><><>

ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ ಮೋಹನ್ ಅಧ್ಯಕ್ಷತೆಯಲ್ಲಿ ಜಮ್ಮುವಿನಲ್ಲಿ ಇಂದು ಭದ್ರತಾ ಪರಿಸ್ಥಿತಿ ಕುರಿತ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಯಿತು. ಈ ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಹಿರಿಯ ಪೊಲೀಸ್ ಮತ್ತು ಭದ್ರತಾ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

ಭಾರತ-ಕಿರ್ಗಿಸ್ತಾನ ಜಂಟಿ ವಿಶೇಷ ಪಡೆಗಳ ಸಮರಭ್ಯಾಸ ಖಂಜರ್-೧೨ರ, ೧೨ನೇ ಆವೃತ್ತಿ ನಾಳೆ ಕಿರ್ಗಿಸ್ತಾನದಲ್ಲಿ ಆರಂಭವಾಗಲಿದೆ. ಹದಿನಾಲ್ಕು ದಿನಗಳ ಜಂಟಿ ಅಭ್ಯಾಸ ಮಾರ್ಚ್ ೨೩ರವರೆಗೆ ನಡೆಯಲಿದೆ. ಅಂತಾರಾಷ್ಟ್ರೀಯ ಭಯೋತ್ಪಾದನೆ ಮತ್ತು ಉಗ್ರವಾದದ ಕಳವಳವನ್ನು ಪರಿಹರಿಸುವಾಗ ರಕ್ಷಣಾ ಸಂಬಂಧಗಳನ್ನು ಬಲಪಡಿಸಲು ಇದು ಉಭಯ ದೇಶಗಳಿಗೆ ಅವಕಾಶ ಒದಗಿಸುತ್ತದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಅಭ್ಯಾಸದಿಂದಾಗಿ ಈ ಪ್ರದೇಶದಲ್ಲಿ ಶಾಂತಿ, ಸ್ಥಿರತೆ ಮತ್ತು ಭದ್ರತೆಯನ್ನು ಉತ್ತೇಜಿಸಲು ಭಾರತ ಮತ್ತು ಕಿರ್ಗಿಸ್ತಾನ್ ಭದ್ರತೆಯನ್ನು ಪುನರುಚ್ಚರಿಸುತ್ತದೆ ಎಂದರು.

<><><><>

ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡ ೭ ವಿಕೆಟ್ ನಷ್ಟಕ್ಕೆ  ೨೫೧ ರನ್ ಗಳಿಸಿದೆ. ೨೫೨ ರನ್‌ಗಳ ಗುರಿ ಬೆನ್ನತ್ತಿದ ಭಾರತ ತಂಡ ಇತ್ತೀಚೆಗೆ ವರದಿ ಬಂದಾಗ ೧೮ ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೇ ೧೦೩ ರನ್ ಮಾಡಿ ಆಡುತ್ತಿದೆ. ಇದಕ್ಕೂ ಮುನ್ನ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಕೀವಿಸ್ ಕೇವಲ ಏಳು ಓವರ್‌ಗಳಲ್ಲಿ ೫೦ರನ್‌ಗಳನ್ನು ಗಳಿಸಿ ಅದ್ಭುತ ಆರಂಭವನ್ನು ನೀಡಿತು. ಅದಾಗ್ಯೂ ಭಾರತೀಯ ಬೌಲರ್‌ಗಳು ನಿಯಮಿತಾಗಿ ವಿಕೆಟ್‌ಗಳನ್ನು ಪಡೆಯುವ ಮೂಲಕ ಪಂದ್ಯದ ಹಿಡಿತವನ್ನು ಸಾಧಿಸಿದರು. ಭಾರತದ ವೇಗಿ ವರುಣ್ ಚಕ್ರವರ್ತಿ, ವಿಲ್ ಯಂಗ್ ವಿಕೆಟ್ ಪಡೆದರೆ, ಗೂಗ್ಲಿ ಎಸೆತದ ಮೂಲಕ ಕುಲ್ ದೀಪ್ ಯಾದವ್ ಟೂರ್ನಿಯ ದ್ವಿಶತಕದ ವೀರ ರಾಚಿನ್ ರವೀಂದ್ರ ವಿಕೆಟ್ ಪಡೆದು, ನಂತರ ನ್ಯೂಜಿಲೆಂಡ್ ಮಾಜಿ ನಾಯಕ ಕೇನ್ ವಿಲಿಯಮ್ಸನ್ ಅವರನ್ನು  ಪಂದ್ಯದಿಂದ ಹೊರಗಟ್ಟಿದರು. ರವಿಂದ್ರ ಜಡೆಜಾ ತಂಡಕ್ಕೆ ಸೇರ್ಪಡೆಯಾಗಿದ್ದು, ಎಲ್‌ಬಿಡಬ್ಲ್ಯೂ ಮೂಲಕ ಟಾಮ್ ಲ್ಯಾಥಮ್ ವಿಕೆಟ್ ಉರುಳಿಸಿದರು. ಈ ಮೂಲಕ ವೇಗಿಗಳಾದ ಮಹಮ್ಮದ್ ಶಮಿ ೧ ವಿಕೆಟ್, ವರುಣ್ ಚಕ್ದವರ್ತಿ ೨ ವಿಕೆಟ್, ಕುಲ್ ದೀಪ್ ಯಾದವ್ ೨ ವಿಕೆಟ್, ರವೀಂದ್ರ ಜಡೇಜ ೧ ವಿಕೇಟ್ ಪಡೆದಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>